ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ 13.01.2026

<u>ಸಿ.ಸಿ.ನಂ.1418/2021</u>

ಪಿರ್ಯಾದುದಾರರು: ರಾಜ್ಯದ ಪರವಾಗಿ ನಗರ ಪೋಲೀಸರು,
ಚಿಕ್ಕಮಗಳೂರು.

ವಿರುದ್ಧ

ಆರೋಪಿತರುಃ 1. ವಾಸೀಮ್ ಎಸ್. @ ಬಿಚ್ಚಾ
ಬಿನ್ ಶಂಶುದ್ದೀನ್,
ವಯಸ್ಸು ಸುಮಾರು 30 ವರ್ಷ,
ವಾಸಃ ಜಾಯ್ ಕಾಫಿ ಕ್ಯೂರಿಂಗ್ ಹತ್ತಿರ,
ಹಿರೇಕೊಳಲೆ ರಸ್ತೆ, ಉಪ್ಪಳ್ಳಿ,
ಚಿಕ್ಕಮಗಳೂರು.

2. ಇಬ್ಬು ಬಿನ್ ಮಹಮದ್ ರಫೀಕ್,
ವಯಸ್ಸು ಸುಮಾರು 29 ವರ್ಷ,
ವಾಸಃ ತರಗಿನಪೇಟೆ, ಗೌರಿಕಾಲುವೆ,
ಚಿಕ್ಕಮಗಳೂರು ಟೌನ್.

<u>ದಂಡ ಪ್ರಕ್ರಿಯ ಸಂಹಿತೆ ಕಲಂಃ 313 ರ ಅಡಿಯಲ್ಲಿ ಆರೋಪಿ ಹೇಳಿಕೆ</u>

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

   ಉತ್ತರ :

2. ಪ್ರಾಸಾ-1 ಡಾಃ ನಟರಾಜ್ - ಸಹ ಪ್ರಾಧ್ಯಾಪಕ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 02.11.2019 ರಂದು ತಾನು ಕಛೇರಿಯಲ್ಲಿ ಕರ್ತವ್ಯದಲ್ಲಿದ್ದಾಗ ನಗರ ಠಾಣೆಯಿಂದ ಒಂದು ಮೆಮೋ ಬಂದಿದ್ದು, ತಮ್ಮ ಕಾಲೇಜಿನ ಹಿಂಭಾಗದಲ್ಲಿರುವ ಸ್ಟೇಡಿಯಂ ಹತ್ತಿರ ಗಾಂಜಾ

ಮಾರಾಟ ಮಾಡುತ್ತಿದ್ದು, ದಾಳಿ ಮಾಡಬೇಕು ಅದಕ್ಕೆ ಸಹಕರಿಸಿ ಎಂದು ಕೇಳಿಕೊಂಡಿದ್ದು, ಸಂಜೆ 05-00 ಗಂಟೆ ಸಮಯಕ್ಕೆ ತಾನು ನಗರ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಪೊಲೀಸ್ ಅಧಿಕಾರಿಗಳು ಅಂಗಶೋಧನೆ ಮಾಡಿಕೊಂಡು, ವಾಹನವನ್ನು ಪರಿಶೀಲಿಸಿ 05-15 ರಿಂದ 5-45 ಗಂಟೆಯವರೆಗೆ ಮಹಜರು ಮಾಡಿದ್ದಾಗಿ, ನಂತರ 06-00 ಗಂಟೆಗೆ ತಮ್ಮ ಕಾಲೇಜಿನ ಹಿಂಭಾಗದ ಸ್ಟೇಡಿಯಂ ಹತ್ತಿರ ಹೋಗಿದ್ದು, ಅಲ್ಲಿ ಪೊಲೀಸ್ ಜೀಪನ್ನು ಮರೆಯಲ್ಲಿ ನಿಲ್ಲಿಸಿ ತಾವು ಕಾಯುತ್ತಿದ್ದು ಆ ಸಮಯದಲ್ಲಿ ಒಂದು ಆಲ್ಟೋ ಕಾರು ಬರುತ್ತಿದ್ದು, ಪೊಲೀಸರು ಅನುಮಾನದಿಂದ ಸದರಿ ಕಾರನ್ನು ನಿಲ್ಲಿಸಿದ್ದು ಮತ್ತು ತನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದಾಗಿ, ಸದರಿ ಆರೋಪಿಯಾದ ನೀವು ಓಡಿಹೋಗಲು ಪ್ರಯತ್ನಿಸಿದ್ದು, ಪೊಲೀಸರು ನಿಮ್ಮನ್ನು ಹಿಡಿದುಕೊಂಡು ನಿಮಗೆ ಮೆಮೋವನ್ನು ಕೊಟ್ಟಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

3. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಪೊಲೀಸರು ಆತನನ್ನು ವಿಚಾರಿಸಿದಾಗ ಕಾರಿನ ಡ್ಯಾಶ್ ಬೋರ್ಡಿನಲ್ಲಿ ಗಾಂಜಾ ಇದೆ ಎಂದು ಪ್ಲಾಸ್ಟಿಕ್ ಚೀಲ ಮತ್ತು ಅದರ ಒಳಗೆ ಇದ್ದ ಒಂದು ಚೀಲವನ್ನು ತೆಗೆದು ಕೊಟ್ಟಿದ್ದಾಗಿ, ಅದರ ಒಳಗೆ ಸೊಪ್ಪು, ಎಲೆ, ಕಡ್ಡಿ ಮತ್ತು ಬೀಜ ಇದ್ದು, ನೀವು ನಿಮ್ಮ ಹೆಸರು ವಾಸೀಂ ಎಂದು ತಿಳಿಸಿದ್ದಾಗಿ, ನಂತರ ಪೊಲೀಸರು ಸದರಿ ಸೊಪ್ಪು ತುಂಬಿದ ಬ್ಯಾಗನ್ನು ತೂಕ ಮಾಡಿದ್ದು ಅದು ಸುಮಾರು 200 ಗ್ರಾಂ ತೂಕ ಇದ್ದು, ಸದರಿ ಗಾಂಜಾ ಇದ್ದ ಬ್ಯಾಗನ್ನು ತನ್ನ ಮತ್ತು ಇತರ ಸಾಕ್ಷಿದಾರರ ಸಮಕ್ಷಮ ಸೀಲು ಮಾಡಿ, 7-00 ಗಂಟೆಯವರೆಗೆ ಮಹಜರು ಮಾಡಿದ್ದಾಗಿ, ನಂತರ ಕಾರು ಮತ್ತು ನಿಮ್ಮೊಂದಿಗೆ ಠಾಣೆಗೆ ಬಂದಿದ್ದಾಗಿ ಹಾಗೂ ಆರೋಪಿಯಾದ ನಿಮ್ಮನ್ನು ಗುರುತಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

4. ಫಿರ್ಯಾ-2 ಅಶೋಕ್ - ಹೆಚ್.ಸಿ-300 ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 02-11-2019 ರಂದು ಸಂಜೆ 5-00 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ತನ್ನನ್ನು ಮತ್ತು ಚಾಸಾ-4 ರಿಂದ 6 ರವರನ್ನು ಕರೆದು, ಗಾಂಜಾವನ್ನು ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ಮಾಡಬೇಕಾಗಿದೆ ಎಂದು ತಿಳಿಸಿದ್ದು, ಆ ವೇಳೆಗೆ ಪಂಚಾಯತುದಾರರನ್ನು ಮತ್ತು ಗೆಜೆಟೆಡ್ ಅಧಿಕಾರಿಗಳನ್ನು ಕರೆಸಿ, ಠಾಣೆಯ ಮುಂಭಾಗದಲ್ಲಿ ಸಂಜೆ 5-15 ರಿಂದ 5-45 ರವರೆಗೆ ದಾಳಿ ಪೂರ್ವ ಮಹಜರನ್ನು ನಡೆಸಿದ್ದು, ಅಂಗಶೋಧನೆಯನ್ನು ಮಾಡಿದ್ದಾಗಿ, ಅದೇ ಸಮಯ ವಾಹನಗಳನ್ನು ಸಹಾ ಶೋಧನೆ ಮಾಡಿದ್ದು, ನಂತರ ಸಿಬ್ಬಂದಿಗಳು, ಪಂಚರು ಮತ್ತು ಗೆಜೆಟೆಡ್ ಅಧಿಕಾರಿಗಳನ್ನು ಕರೆದುಕೊಂಡು, ಚಾಸಾ-1 ರವರೊಂದಿಗೆ ದಂಟರಮಕ್ಕಿ ರಸ್ತೆಯ ಹತ್ತಿರ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮುಂಭಾಗ ಸಂಜೆ 6-00 ಗಂಟೆಯ ಸಮಯದಲ್ಲಿ ಕಾಯುತ್ತಿರುವಾಗ ಕೆಎ-04/ಎಂಎ-9892 ಸಿಲ್ವರ್ ಬಣ್ಣದ ಮಾರುತಿ ಕಾರು ಬಂದಿದ್ದು, ಅದನ್ನು ತಡೆದು ನಿಲ್ಲಿಸಿದ್ದು, ಚಾಲಕನಾದ ನೀವು ಓಡಿಹೋಗಲು ಪ್ರಯತ್ನಿಸಿದ್ದು, ನಿಮ್ಮನ್ನು ಹಿಡಿದು ಚಾಸಾ-1 ರವರ ಮುಂದೆ ಹಾಜರುಪಡಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

5. ಫಿರ್ಯಾ-2 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಚಾಸಾ-1 ರವರು ನಿಮ್ಮ ಹೆಸರನ್ನು ಕೇಳಲಾಗಿ ವಸೀಂ ಎಂದು ತಿಳಿಸಿದ್ದು, ನಂತರ ಚಾಸಾ-1 ರವರು ಸದರಿ ಕಾರನ್ನು ಗೆಜೆಟೆಡ್ ಅಧಿಕಾರಿಗಳ ಸಮಕ್ಷಮ ತಪಾಸಣೆ ಮಾಡಿದಾಗ ಕಾರಿನ ಮುಂಭಾಗದ ಡ್ಯಾಶ್ ಬೋರ್ಡಿನಲ್ಲಿ ಗಾಂಜಾ ಇರುವುದು ಕಂಡು ಬಂದಿದ್ದಾಗಿ, ಈ ಬಗ್ಗೆ ವಿಚಾರಿಸಲಾಗಿ ಇಬ್ಬು ಎನ್ನುವವನು ಮಾರಾಟ ಮಾಡಲು ತನಗೆ ಕೊಟ್ಟಿರುವುದಾಗಿ ತಿಳಿಸಿದ್ದಾಗಿ, ಸದರಿ ಗಾಂಜಾವನ್ನು ಅಮಾನತ್ತುಪಡಿಸಿಕೊಂಡು, ತೂಕ ಮಾಡಿದಾಗ ಅದು 200 ಗ್ರಾಂ ಇದ್ದು, ಅದನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ, ಬಿಳಿ ಬಟ್ಟೆಯ ಬ್ಯಾಗಿನಲ್ಲಿ ಹಾಕಿ ಅದಕ್ಕೆ ಕೆಎಸ್.ಪಿ. ಎಂಬ ಅರಗಿನ ಸೀಲು ಮಾಡಿದ್ದಾಗಿ, ಸದರಿ ಮಹಜರನ್ನು ಸಂಜೆ 6-20 ರಿಂದ 7-20 ರವರೆಗೆ ಜರುಗಿಸಿದ್ದಾಗಿ, ಮಹಜರು ಸಮಯ

ಸದರಿ ಕಾರನ್ನು ಸಹಾ ವಶಪಡಿಸಿಕೊಂಡಿದ್ದಾಗಿ, ಸದರಿ ಮಹಜರನ್ನು ಚಾಸಾ-1 ರವರ ನಿರ್ದೇಶನದಂತೆ ಸ್ಥಳದಲ್ಲಿಯೇ ಲ್ಯಾಪ್ ಟಾಪಿನಲ್ಲಿ ತಾನು ಟೈಪ್ ಮಾಡಿದ್ದಾಗಿ, ಈ ಬಗ್ಗೆ ತಾನು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

6. ಫ್ರಾಸಾ-3 ಮಹಮದ್ ಸಲೀಂ- ಪಿಐ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 02-11-2019 ರಂದು ಮಧ್ಯಾಹ್ನ 3-30 ಗಂಟೆಗೆ ತಾನು ಕಛೇರಿಯಲ್ಲಿರುವಾಗ ಉಪ್ಪಳ್ಳಿ ವಾಸಿ ವಸೀಂ ಎನ್ನುವವನು ಎಐಟಿ ಸರ್ಕಲ್ ನಲ್ಲಿ ಎಐಟಿ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾವನ್ನು ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದು, ಈ ದಿನ ಸಂಜೆ 6-00 ರಿಂದ 7-00 ಗಂಟೆ ಮಧ್ಯೆ ಕೆಎ-04/ಎಂಎ-9892 ಮಾರುತಿ ಕಾರಿನಲ್ಲಿ ದಂಟರಮಕ್ಕಿಯಿಂದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮಾರ್ಗವಾಗಿ ಗಾಂಜಾವನ್ನು ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಈ ಬಗ್ಗೆ ಸಿಪಿಐ ದಿನಚರಿಯಲ್ಲಿ ನಮೂದು ಮಾಡಿ, ದಾಳಿ ಮಾಡಲು ಅನುಮತಿ ಮತ್ತು ಶೋಧನಾ ವಾರೆಂಟನ್ನು ಕೋರಿ ಎಸ್.ಪಿ. ರವರಿಗೆ ಪತ್ರ ವ್ಯವಹಾರ ಮಾಡಿದ್ದಾಗಿ, ದಾಳಿ ಮಾಡುವ ಸಮಯ ಪತ್ರಾಂಕಿತ ಅಧಿಕಾರಿಗಳು ಬಂದು ದಾಳಿಗೆ ಸಹಕರಿಸುವಂತೆ ಐಡಿಎಸ್.ಜಿ. ಪ್ರಾಂಶುಪಾಲರಿಗೆ ಪತ್ರ ವ್ಯವಹಾರ ಮಾಡಿದ್ದು, ಇಬ್ಬರು ಪಂಚರನ್ನು ಕಳಿಸುವಂತೆ ತಹಸೀಲ್ದಾರರಿಗೆ ಪತ್ರ ವ್ಯವಹಾರ ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

7. ಫ್ರಾಸಾ-3 ರವರು ತಮ್ಮ ಮುಂದುವರಿದ ನುಡಿ ಸಾಕ್ಷ್ಯದಲ್ಲಿ ನಂತರ ಸಂಜೆ 5-00 ಗಂಟೆಗೆ ಐಡಿಎಸ್.ಜಿ. ಕಾಲೇಜಿನಿಂದ ನಟರಾಜ್ ಮತ್ತು ತಾಲ್ಲೂಕು ಕಛೇರಿಯಿಂದ ಮನೋಜ್ ರವರು ಬಂದಿದ್ದು, ಇವರುಗಳಿಗೆ ಗಾಂಜಾದ ಬಗ್ಗೆ ಮಾಹಿತಿ ತಿಳಿಸಿ, ನೋಟೀಸ್ ಜಾರಿ ಮಾಡಿದ್ದಾಗಿ, ಅವರು ಪಂಚರಾಗಿ ಬರಲು ಒಪ್ಪಿಕೊಂಡಿದ್ದು, ಠಾಣಾಧಿಕಾರಿಗಳಾದ ಚಾಸಾ-4 ರಿಂದ 7 ರವರುಗಳನ್ನು ಹಾಗೂ ಪ್ರಕಾಶ್ ಎನ್ನುವವರನ್ನು ಜೊತೆ ಮಾಡಿಕೊಂಡಿದ್ದು, ನಂತರ ದಾಳಿಗೆ

ಹೋಗುವ ತಮ್ಮನ್ನು, ಸಿಬ್ಬಂದಿಗಳನ್ನು ಹಾಗೂ ಇಲಾಖಾ ವಾಹನ ಕೆಎ-18/ಜಿ-1011 ಅನ್ನು ಶೋಧಿಸಿ ದಾಳಿ ಪೂರ್ವ ಮಹಜರ್ ಮಾಡುವಂತೆ ಚಾಸಾ-2 ರವರನ್ನು ಕೋರಿಕೊಂಡಿದ್ದು, ಇವರು ಚಾಸಾ-8 ಮತ್ತು 9 ರವರ ಸಮಕ್ಷಮ ತನ್ನ, ಸಿಬ್ಬಂದಿಗಳ ಹಾಗೂ ಇಲಾಖಾ ವಾಹನವನ್ನು ಶೋಧಿಸಿ ದಾಳಿ ಪೂರ್ವ ಮಹಜರ್ ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

8. ಫ್ರಾಸಾ-3 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಪಂಚರು, ಸಿಬ್ಬಂದಿಗಳು, ಪತ್ರಾಂಕಿತ ಅಧಿಕಾರಿಗಳೊಂದಿಗೆ ಇಲಾಖಾ ವಾಹನದಲ್ಲಿ ಚಿಕ್ಕಮಗಳೂರು ನಗರದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಬಳಿ ತಲುಪಿದ್ದಾಗಿ, ಕ್ರೀಡಾಂಗಣದ ಕಾಂಪೌಂಡ್ ಬಳಿ ನಿಂತು ಕಾಯುತ್ತಿರಬೇಕಾದರೆ 6-20 ಗಂಟೆಗೆ ದಂಟರಮಕ್ಕಿ ಕಡೆಯಿಂದ ಒಂದು ಆಲ್ಟೋ ಸುಜುಕಿ ಕಾರು ಬಂದಿದ್ದು, ಸದರಿ ಕಾರನ್ನು ಅಡ್ಡ ಹಾಕಿ ಬದಿಗೆ ನಿಲ್ಲಿಸುವಂತೆ ಸೂಚಿಸಿದ್ದು, ಚಾಲಕನಾದ ನೀವು ಕಾರನ್ನು ಬದಿಗೆ ನಿಲ್ಲಿಸಿ, ಓಡಿಹೋಗಲು ಪ್ರಯತ್ನಿಸಿದ್ದು, ಚಾಸಾ-5 ಮತ್ತು 7 ರವರು ನಿಮ್ಮನ್ನು ಹಿಡಿದು ತನ್ನ ಮತ್ತು ಚಾಸಾ-2 ರವರ ಮುಂದೆ ಹಾಜರುಪಡಿಸಿದ್ದಾಗಿ, ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಸಮಕ್ಷಮ ವಿಚಾರ ಮಾಡಿದಾಗ ನೀವು ನಿಮ್ಮ ಹೆಸರನ್ನು ವಸೀಂ ಯಾನೆ ಚಿಚ್ಚ ಬಿನ್ ಶಂಶುದ್ದೀನ್, ಉಪ್ಪಳ್ಳಿ ಎಂದು ತಿಳಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

9. ಫ್ರಾಸಾ-3 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಸದರಿ ಕಾರಿನಲ್ಲಿ ಏನಿದೆ ಎಂದು ಕೇಳಲಾಗಿ ತರಗಿನಪೇಟೆ ವಾಸಿ ಇಬ್ಬು ಅಲಿಯಾಸ್ ಗಾಂಜಾ ಇಬ್ಬು ಎನ್ನುವವನು ತನಗೆ ಪರಿಚಯವಿದ್ದು ಆತನು ತನಗೆ ಗಾಂಜಾ ಮಾರಲು ತಂದು ಕೊಡುತ್ತಿದ್ದು, ತಾನು ಅದನ್ನು ತಲಾ 10 ಗ್ರಾಂ ನಂತೆ ಚಿಕ್ಕ ಚಿಕ್ಕ ಪ್ಯಾಕೆಟ್ ಗಳನ್ನು ಮಾಡಿ, ಎಐಟಿ ಸರ್ಕಲ್ ನಲ್ಲಿ ವಿದ್ಯಾರ್ಥಿಗಳಿಗೆ ಮಾರಾಟ ಮಾಡಿಕೊಂಡು ಬರುತ್ತಿರುವುದಾಗಿ, ವಾರಕ್ಕೆ 2 ಬಾರಿ ಇಬ್ಬು ಹೇಳಿದಂತೆ ಮಾರಾಟ ಮಾಡುತ್ತಿರುವುದಾಗಿ, ಒಂದು ಪ್ಯಾಕೆಟ್ ನ 10 ಗ್ರಾಂ ಗಾಂಜಾವನ್ನು

ರೂ.300/- ಗಳಿಗೆ ಮಾರಾಟ ಮಾಡುತ್ತಿದ್ದು, ಮಾರಾಟ ಮಾಡಿದ ಹಣಕ್ಕೆ ಶೇ.20 ಅನ್ನು ಕಮಿಷನ್ ಕೊಡುತ್ತಿರುವುದಾಗಿ ತಿಳಿಸಿದ್ದು, ಈ ದಿನ ಕೂಡ ಗಾಂಜಾವನ್ನು ಮಾರಾಟ ಮಾಡಲು ತನಗೆ ಕೊಟ್ಟಿದ್ದು ಅದನ್ನು ಮಾರಾಟ ಮಾಡಲು ತಾನು ಎಐಟಿ ಸರ್ಕಲ್ ಗೆ ಹೋಗುತ್ತಿದ್ದೇನೆ ಎಂದು ತಿಳಿಸಿದ್ದು, ಗಾಂಜಾ ಎಲ್ಲಿದೆ ಎಂದು ಕೇಳಲಾಗಿ ಕಾರಿನ ಡ್ಯಾಷ್ ಬೋರ್ಡಿನಲ್ಲಿ ಇದೆ ಎಂದು ತಿಳಿಸಿದ್ದು, ಕಾರಿನ ಬಗ್ಗೆ ಕೇಳಲಾಗಿ ಅದು ತನ್ನ ಅಕ್ಕ ಚಾಸಾ-12 ರವರಿಗೆ ಸೇರಿರುತ್ತದೆ ಎಂದು ತಿಳಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

10. ಫ್ರಾಸಾ-3 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಕಾರನ್ನು ಮತ್ತು ನಿಮ್ಮನ್ನು ಶೋಧನೆ ಮಾಡಲು ಕೇಳಲಾಗಿ ನೀವು ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ಶೋಧನೆ ಮಾಡಲು ಬಯಸಿದ್ದು, ಈ ಬಗ್ಗೆ ನಿಮಗೆ ನೋಟೀಸ್ ಜಾರಿ ಮಾಡಿದ್ದಾಗಿ, ಗಾಂಜಾವನ್ನು ಮಾರಾಟ ಮಾಡಲು ಸಾಗಿಸಲು ಲೈಸೆನ್ಸ್ ಇದೆಯೇ ಎಂದು ಕೇಳಲಾಗಿ ನೀವು ಇಲ್ಲ ಎಂದು ಹೇಳಿದ ಮೇರೆಗೆ ನಿಮ್ಮನ್ನು ವಶಕ್ಕೆ ಪಡೆದುಕೊಂಡಿದ್ದಾಗಿ, ನಂತರ ಚಾಸಾ-2 ರವರು ರಸ್ತೆ ಬದಿಯಲ್ಲಿ ನಿಂತಿದ್ದ ಕಾರನ್ನು ಹಾಗೂ ಆರೋಪಿಯಾದ ನಿಮ್ಮನ್ನು ಪಂಚರ ಸಮಕ್ಷಮ ಶೋಧನೆ ಮಾಡಲಾಗಿ, ಕಾರಿನ ಡ್ಯಾಶ್ ಬೋರ್ಡಿನಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ತೆಗೆದು ನೋಡಲಾಗಿ ಅದರ ಒಳಗೆ ಬೀಜ, ಕಾಂಡ, ಹೂವು ಹಣ್ಣು ಹಾಗೂ ಎಲೆಗಳಿಂದ ಕೂಡಿದ ಗಾಂಜಾ ಇರುವುದು ಕಂಡು ಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

11. ಫ್ರಾಸಾ-3 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಠಾಣೆಯಿಂದ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು 200 ಗ್ರಾಂ ತೂಕ ಇರುವುದು ಕಂಡು ಬಂದಿದ್ದು, ನಂತರ ಗಾಂಜಾ ಮತ್ತು ಕಾರನ್ನು ಅಮಾನತ್ತು ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡಿದ್ದಾಗಿ, ನಂತರ ಗಾಂಜಾವನ್ನು

ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ಅದರ ಮೇಲೆ ಪತ್ರಾಂಕಿತ ಅಧಿಕಾರಿ, ಪಂಚರು ಹಾಗೂ ತನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿದ್ದಾಗಿ, ಸದರಿ ಮಹಜರನ್ನು ಸಂಜೆ 6-20 ರಿಂದ 7-20 ರವರಿಗೆ ಠಾಣೆಯಿಂದ ತೆಗೆದುಕೊಂಡು ಹೋದ ಸರ್ಚ್ ಲೈಟ್ ಹಾಗೂ ಬೀದಿ ದೀಪಗಳ ಸಹಾಯದಿಂದ ಜರುಗಿಸಿದ್ದಾಗಿ, ನಂತರ ಸ್ಥಳದಲ್ಲಿ ಇದ್ದ ಪ್ರತ್ಯಕ್ಷ ಸಾಕ್ಷಿದಾರರಿಗೆ ನೋಟೀಸ್ ಜಾರಿ ಮಾಡಿ, ವಿಚಾರಣೆಗೆ ಠಾಣೆಗೆ ಹಾಜರಾಗುವಂತೆ ತಿಳಿಸಿದ್ದಾಗಿ, ನಂತರ ವಶಪಡಿಸಿಕೊಂಡ ಕಾರು, ವಶಕ್ಕೆ ಪಡೆದ ಆರೋಪಿಯಾದ ನೀವು ಹಾಗೂ ಗಾಂಜಾದೊಂದಿಗೆ ಸಂಜೆ 7-45 ಗಂಟೆಗೆ ಠಾಣೆಗೆ ಬಂದು, ರಾತ್ರಿ 8-15 ರವರೆಗೆ ಸ್ವಪಿರ್ಯಾದನ್ನು ತಯಾರಿಸಿ, ವಶಪಡಿಸಿಕೊಂಡ ವಸ್ತುಗಳು ಹಾಗೂ ಆರೋಪಿಯನ್ನು ಚಾಸಾ-15 ರವರ ಮುಂದೆ ಹಾಜರುಪಡಿಸಿ, ಕಾನೂನು ಕ್ರಮ ಕೈಗೊಳ್ಳಲು ಹೇಳಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

12. ಫ್ರಾಸಾ-4 ಮೇಘಾ - ಡಬ್ಲ್ಯೂಪಿಸಿ-132 ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 02-11-2019 ರಂದು ಮಧ್ಯಾಹ್ನ 3-30 ಗಂಟೆಗೆ ಚಾಸಾ-1 ರವರಿಗೆ ಭಾತ್ಮಿದಾರರು ಕರೆ ಮಾಡಿ ಉಪ್ಪಳ್ಳಿ ವಾಸಿ ವಸೀಂ ಎನ್ನುವವನು ಎಐಟಿ ಸರ್ಕಲ್‌ನಲ್ಲಿ ಎಐಟಿ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾವನ್ನು ಎಲ್ಲಿಂದಲೋ ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದು, ಈ ದಿನ ಸಂಜೆ 6-00 ರಿಂದ 7-00 ಗಂಟೆ ಮಧ್ಯೆ ಕೆಎ-04/ಎಂಎ-9892 ಮಾರುತಿ ಕಾರಿನಲ್ಲಿ ದಂಟರಮಕ್ಕಿಯಿಂದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮಾರ್ಗವಾಗಿ ಗಾಂಜಾವನ್ನು ತೆಗೆದುಕೊಂಡು ಹೋಗುತ್ತಿರುವುದಾಗಿ ಖಚಿತ ಮಾಹಿತಿ ಬಂದಿರುವುದಾಗಿ ಚಾಸಾ-1 ರವರು ತನಗೆ, ಹೆಚ್.ಸಿ.324 ಶಶಿಧರ್, ಪಿಸಿ-414 ಇಮಾನ್ ಖಾನ್, ಜೀಪ್ ಚಾಲಕ ಇಬ್ರಾಹಿಂ ಖಾನ್ ಇವರಿಗೆ ತಿಳಿಸಿದ್ದಾಗಿ, ಚಾಸಾ-1 ರವರು ಶೋಧನಾ ವಾರೆಂಟನ್ನ ಪಡೆದುಕೊಂಡಿದ್ದು, ಚಾಸಾ-1 ರವರು ದಾಳಿ ಮಾಡುವ ಸಮಯ ಪತ್ರಾಂಕಿತ ಅಧಿಕಾರಿಗಳು ಬಂದು ದಾಳಿಗೆ ಸಹಕರಿಸುವಂತೆ ಐಡಿಎಸ್.ಜಿ. ಪ್ರಾಂಶುಪಾಲರಿಗೆ ಪತ್ರ ವ್ಯವಹಾರ ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

13. ಫ್ರಾಸಾ-4 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಇಬ್ಬರು ಪಂಚರನ್ನು ಕಳಿಸುವಂತೆ ತಹಸೀಲ್ದಾರರಿಗೆ ಪತ್ರ ವ್ಯವಹಾರ ಮಾಡಿದ್ದಾಗಿ, ಸಂಜೆ 5-00 ಗಂಟೆಗೆ ಐಡಿಎಸ್.ಜಿ. ಕಾಲೇಜಿನಿಂದ ನಟರಾಜ್ ಮತ್ತು ತಾಲ್ಲೂಕು ಕಛೇರಿಯಿಂದ ಮನೋಜ್ ರವರು ಬಂದಿದ್ದಾಗಿ, ಇವರುಗಳಿಗೆ ಗಾಂಜಾದ ಬಗ್ಗೆ ಮಾಹಿತಿ ತಿಳಿಸಿ, ನೋಟೀಸ್ ಜಾರಿ ಮಾಡಿದ್ದಾಗಿ, ಅವರು ಪಂಚರಾಗಿ ಬರಲು ಒಪ್ಪಿಕೊಂಡಿದ್ದು, ಠಾಣಾಧಿಕಾರಿಗಳಾದ ಚಾಸಾ4 ರಿಂದ 7 ರವರುಗಳನ್ನು ಹಾಗೂ ಪ್ರಕಾಶ್ ಎನ್ನುವವರನ್ನು ಜೊತೆ ಮಾಡಿದ್ದು, ಚಾಸಾ-1 ರವರು ತನ್ನನ್ನು ಮತ್ತು ತಮ್ಮ ಸಿಬ್ಬಂದಿಗಳನ್ನು ಹಾಗೂ ಇಲಾಖಾ ವಾಹನ ಕೆಎ-18/ಜಿ-1011 ಅನ್ನು ಶೋಧಿಸಿ ದಾಳಿ ಪೂರ್ವ ಮಹಜರ್ ಮಾಡುವಂತೆ ಚಾಸಾ-2 ರವರನ್ನು ಕೋರಿಕೊಂಡಿದ್ದು, ಇವರು ಚಾಸಾ-8 ಮತ್ತು 9 ರವರ ಸಮಕ್ಷಮ ತನ್ನ, ಸಿಬ್ಬಂದಿಗಳ ಹಾಗೂ ಇಲಾಖಾ ವಾಹನವನ್ನು ಶೋಧಿಸಿ ದಾಳಿ ಪೂರ್ವ ಮಹಜರ್ ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

14. ಫ್ರಾಸಾ-4 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಪಂಚರು, ಸಿಬ್ಬಂದಿಗಳು, ಪತ್ರಾಂಕಿತ ಅಧಿಕಾರಿಗಳೊಂದಿಗೆ ಇಲಾಖಾ ವಾಹನದಲ್ಲಿ ಚಿಕ್ಕಮಗಳೂರು ನಗರದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಬಳಿ ತಲುಪಿದ್ದಾಗಿ ಕ್ರೀಡಾಂಗಣದ ಕಾಂಪೌಂಡ್ ಬಳಿ ನಿಂತು ಕಾಯುತ್ತಿರಬೇಕಾದರೆ 6-20 ಗಂಟೆಗೆ ದಂಟರಮಕ್ಕಿ ಕಡೆಯಿಂದ ಒಂದು ಆಲ್ಟೋ ಸುಜುಕಿ ಕಾರು ಸಂಖ್ಯೆಕೆಎ-04/ಎಂಎ-9892 ಬಂದಿದ್ದು, ಸದರಿ ಕಾರನ್ನು ಅಡ್ಡ ಹಾಕಿ ಬದಿಗೆ ನಿಲ್ಲಿಸುವಂತೆ ಸೂಚಿಸಿದ್ದು, ಆರೋಪಿಯಾದ ನೀವು ಕಾರನ್ನು ಬದಿಗೆ ನಿಲ್ಲಿಸಿ, ಓಡಿಹೋಗಲು ಪ್ರಯತ್ನಿಸಿದ್ದು, ಚಾಸಾ-5 ಮತ್ತು 7 ರವರು ನಿಮ್ಮನ್ನು ಹಿಡಿದು ತನ್ನ ಮತ್ತು ಚಾಸಾ-2 ರವರ ಮುಂದೆ ಹಾಜರುಪಡಿಸಿದ್ದಾಗಿ, ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಸಮಕ್ಷಮ ವಿಚಾರ ಮಾಡಿದಾಗ ನೀವು ನಿಮ್ಮ ಹೆಸರನ್ನು ವಸೀಂ ಯಾನೆ ಚಿಟ್ಟ ಬಿನ್ ಶಂಶುದ್ದೀನ್, ಉಪ್ಪಳ್ಳಿ ಎಂದು ತಿಳಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

15. ಫ್ರಾಸಾ-4 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಸದರಿ ಕಾರಿನಲ್ಲಿ ಏನಿದೆ ಎಂದು ಕೇಳಲಾಗಿ ತರಗಿನಪೇಟೆ ವಾಸಿ ಇಬ್ಬು ಅಲಿಯಾಸ್ ಗಾಂಜಾ ಇಬ್ಬು ಎನ್ನುವವನು ತನಗೆ ಗಾಂಜಾ ಮಾರಾಟ ಮಾಡಲು ತಂದು ಕೊಡುತ್ತಿದ್ದು, ತಾನು ಅದನ್ನು ತಲಾ 10 ಗ್ರಾಂ ನಂತೆ ಚಿಕ್ಕ ಚಿಕ್ಕ ಪ್ಯಾಕೆಟ್ ಗಳನ್ನು ಮಾಡಿ, ಎಐಟಿ ಸರ್ಕಲ್ ನಲ್ಲಿ ವಿದ್ಯಾರ್ಥಿಗಳಿಗೆ ಮಾರಾಟ ಮಾಡಿಕೊಂಡು ಬರುತ್ತಿರುವುದಾಗಿ, ವಾರಕ್ಕೆ 2 ಬಾರಿ ಇಬ್ಬು ಹೇಳಿದಂತೆ ಮಾರಾಟ ಮಾಡುತ್ತೇನೆ ಎಂಬುದಾಗಿ, ಒಂದು ಪ್ಯಾಕೆಟ್‌ನ 10 ಗ್ರಾಂ ಗಾಂಜಾವನ್ನು ರೂ.300/- ಗಳಿಗೆ ಮಾರಾಟ ಮಾಡುತ್ತಿದ್ದು, ಮಾರಾಟ ಮಾಡಿದ ಹಣಕ್ಕೆ ಶೇ.20 ಅನ್ನು ಕಮಿಷನ್ ಕೊಡುತ್ತಾನೆ ಎಂದು ತಿಳಿಸಿದ್ದು, ಈ ದಿನ ಕೂಡ ಗಾಂಜಾವನ್ನು ಮಾರಾಟ ಮಾಡಲು ತನಗೆ ಕೊಟ್ಟಿದ್ದು ಅದನ್ನು ಮಾರಾಟ ಮಾಡಲು ತಾನು ಎಐಟಿ ಸರ್ಕಲ್‌ಗೆ ಹೋಗುತ್ತಿದ್ದೇನೆ ಎಂದು ತಿಳಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

16. ಫ್ರಾಸಾ-4 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಸದರಿ ಗಾಂಜಾ ಎಲ್ಲಿದೆ ಎಂದು ಕೇಳಲಾಗಿ ಕಾರಿನ ಡ್ಯಾಷ್ ಬೋರ್ಡಿನಲ್ಲಿ ಇದೆ ಎಂದು ತಿಳಿಸಿದ್ದು, ಕಾರಿನ ಬಗ್ಗೆ ಕೇಳಲಾಗಿ ಅದು ತನ್ನ ಅಕ್ಕ ಚಾಸಾ-12 ರವರಿಗೆ ಸೇರಿದ್ದಾಗಿ ತಿಳಿಸಿದ್ದು, ನಂತರ ಕಾರನ್ನು ಮತ್ತು ನಿಮ್ಮನ್ನು ಶೋಧನೆ ಮಾಡಲು ಕೇಳಲಾಗಿ ನೀವು ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ಶೋಧನೆ ಮಾಡಲು ಬಯಸಿದ್ದು, ಈ ಬಗ್ಗೆ ನಿಮಗೆ ನೋಟೀಸ್ ಜಾರಿ ಮಾಡಿದ್ದು, ಗಾಂಜಾವನ್ನು ಮಾರಾಟ ಮಾಡಲು ಸಾಗಿಸಲು ಲೈಸೆನ್ಸ್ ಇದೆಯೇ ಎಂದು ಕೇಳಲಾಗಿ ನೀವು ಇಲ್ಲ ಎಂದು ಹೇಳಿದ ಮೇರೆಗೆ ನಿಮ್ಮನ್ನು ವಶಕ್ಕೆ ಪಡೆದುಕೊಂಡಿದ್ದಾಗಿ, ನಂತರ ಚಾಸಾ-2 ರವರು ಕಾರನ್ನು ಹಾಗೂ ಆರೋಪಿಯಾದ ನಿಮ್ಮನ್ನು ಪಂಚರ ಸಮಕ್ಷಮ ಶೋಧನೆ ಮಾಡಲಾಗಿ, ಕಾರಿನ ಡ್ಯಾಶ್ ಬೋರ್ಡಿನಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದರ ಒಳಗೆ ಬೀಜ, ಕಾಂಡ, ಹೂವು ಹಣ್ಣು ಹಾಗೂ ಎಲೆಗಳಿಂದ ಕೂಡಿದ ಗಾಂಜಾ ಇರುವುದು ಕಂಡು ಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

17. ಫ್ರಾಸಾ-4 ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಠಾಣೆಯಿಂದ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು 200 ಗ್ರಾಂ ತೂಕ ಇರುವುದು ಕಂಡು ಬಂದಿದ್ದು, ನಂತರ ಗಾಂಜಾ ಮತ್ತು ಕಾರನ್ನು ಅಮಾನತ್ತು ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡಿದ್ದು, ನಂತರ ಗಾಂಜಾವನ್ನು ಬಿಳಿಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ಅದರ ಮೇಲೆ ಪತ್ರಾಂಕಿತ ಅಧಿಕಾರಿ, ಪಂಚರು ಹಾಗೂ ತನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿದ್ದಾಗಿ, ಮಹಜರನ್ನು ಸಂಜೆ 6-20 ರಿಂದ 7-20 ರವರಿಗೆ ಜರುಗಿಸಿದ್ದಾಗಿ, ನಂತರ ಸ್ಥಳದಲ್ಲಿದ್ದ ಪ್ರತ್ಯಕ್ಷ ಸಾಕ್ಷಿದಾರರಿಗೆ ನೋಟೀಸ್ ಜಾರಿ ಮಾಡಿ, ವಿಚಾರಣೆಗೆ ಠಾಣೆಗೆ ಹಾಜರಾಗುವಂತೆ ತಿಳಿಸಿದ್ದಾಗಿ ನಂತರ ವಶಪಡಿಸಿಕೊಂಡ ಕಾರು, ಆರೋಪಿಯಾದ ನಿಮ್ಮನ್ನು ಹಾಗೂ ಗಾಂಜಾದೊಂದಿಗೆ ಠಾಣೆಗೆ ಹಾಜರಾಗಿ ತಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

18. ಫ್ರಾಸಾ-4 ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿಃ07.11.2019 ರಂದು ತನಿಖಾಧಿಕಾರಿಯವರು ಈ ಪ್ರಕರಣದ ತನಿಖಾ ಕಾಲಕ್ಕೆ ತೆಗೆದ ಫೋಟೋಗಳನ್ನು ಸಿ.ಡಿ.ಗೆ ವರ್ಗಾವಣೆ ಮಾಡಿಕೊಡುವಂತೆ ನಿರ್ದೇಶಿಸಿದ ಮೇರೆಗೆ ತಮ್ಮ ಠಾಣಾ ಹ್ಯಾಂಡಿ ಕ್ಯಾಮ್‌ನಲ್ಲಿ ಮಹಜರ್ ಕಾಲಕ್ಕೆ ತೆಗೆದ ಫೋಟೋಗಳನ್ನು ಠಾಣಾ ಕಂಪ್ಯೂಟರ್ ಸಹಾಯದಿಂದ ಸಿ.ಡಿ.ಗೆ ವರ್ಗಾವಣೆ ಮಾಡಿ ಫೋಟೋ ಪ್ರಿಂಟ್ ಹಾಕಿದ್ದಾಗಿ, ಈ ಸಂಬಂಧ ದೃಢೀಕರಣ ಪತ್ರವನ್ನು ಸಿ.ಡಿ. ಮತ್ತು ಪ್ರಿಂಟ್ ಹಾಕಿದ ಫೋಟೋ ಸಹಿತ ತನಿಖಾಧಿಕಾರಿ ಮುಂದೆ ಹಾಜರು ಮಾಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

19. ಫ್ರಾಸಾ-5 ಚಂದ್ರಯ್ಯ - ಹೆಚ್.ಸಿ.222 ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ02.11.2019 ರಂದು ತಾನು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ರಾತ್ರಿಃ08.30 ಗಂಟೆಗೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಆರೋಪಿ,

ಮಾಲು, ಮಹಜರ್ ಮತ್ತು ವರದಿಯನ್ನು ಹಾಜರು ಮಾಡಲಾಗಿ ಅವುಗಳನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆಃ175/2019 ರಂತೆ ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾಗಿ, ಅದೇ ದಿನ ತನ್ನ ಮುಂದೆ ಹಾಜರು ಮಾಡಿದ ಮಾಲನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾಗಿ, ಆರೋಪಿಯಾದ ನಿಮ್ಮನ್ನು ದಸ್ತಗಿರಿ ಕ್ರಮಕ್ಕೆ ಅನುಗುಣವಾಗಿ ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾಗಿ, ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-16 ರವರಿಗೆ ವಹಿಸಿಕೊಟ್ಟಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

20. ಫ್ರಾಸಾ-6 ಗುರುಪ್ರಸಾದ್ ಎ.ಎಸ್. - ಪಿ.ಸಿ.202 ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 27.02.2020 ರಂದು 200 ಗ್ರಾಂ. ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರು ಮಡಿವಾಳಕ್ಕೆ ತೆಗೆದುಕೊಂಡು ಹೋಗಿ ಕೊಟ್ಟು ಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

21. ಫ್ರಾಸಾ-7 ಬಸವರಾಜು ಜಿ.ಕೆ. - ಪಿ.ಎಸ್.ಐ. ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 02.11.2019 ರಂದು ಚಾಸಾ-15 ರವರಿಂದ ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಪಡೆದಿದ್ದಾಗಿ, ಅದೇ ದಿನ 1 ನೇ ಆರೋಪಿಯಾದ ನಿಮ್ಮ ಸ್ವಇಚ್ಛಾ ಹೇಳಿಕೆಯನ್ನು ಪಡೆದಿದ್ದಾಗಿ, ದಿಃ 03.11.2019 ರಂದು ಚಾಸಾ-2 ರಿಂದ ಚಾಸಾ-10 ರವರ ಹೇಳಿಕೆಗಳನ್ನು ಪಡೆದಿದ್ದಾಗಿ, ದಿಃ06.11.2019 ರಂದು 2 ನೇ ಹೆಚ್ಚುವರಿ ಸೀನಿಯರ್ ಸಿವಿಲ್ ಜಡ್ಜ್ ರವರ ಮುಂದೆ ಅಮಾನತ್ತುಪಡಿಸಿದ ಮುದ್ದೆ ಮಾಲುಗಳನ್ನು ಇನ್ವೆಂಟರಿ ಮಾಡಿಸಿದ್ದಾಗಿ, ದಿಃ 07.11.2019 ರಂದು ಚಾಸಾ-6 ರವರು ನೀಡಿದ 65(ಬಿ) ದೃಢೀಕರಣ ಪತ್ರವನ್ನು ತೆಗೆದುಕೊಂಡಿದ್ದಾಗಿ, ದಿಃ12.11.2019 ರಂದು ತಾನು ವರ್ಗಾವಣೆಗೊಂಡಿದ್ದರಿಂದ

ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಪಿ.ಎಸ್.ಐ ತೇಜಸ್ವಿರವರಿಗೆ ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

22. ಫ್ರಾಸಾ-8 ವಿನುತ್ ಹೆಚ್.ಆರ್. - ಪಿ.ಎಸ್.ಐ. ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 04.01.2021 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ತೇಜಸ್ವಿ ಪಿ.ಎಸ್.ಐ ರವರಿಂದ ಪಡೆದುಕೊಂಡು ಪರಿಶೀಲಿಸಿದ್ದಾಗಿ, ದಿಃ 09.01.2021 ರಂದು ಚಾಸಾ-12 ರವರ ಹೇಳಿಕೆ ಪಡೆದಿದ್ದಾಗಿ, ಅದೇ ದಿನ 2 ನೇ ಆರೋಪಿಯಾದ ನೀವು ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾದ ಮೇರೆಗೆ ಜಾಮೀನು ಪ್ರಕ್ರಿಯೆ ನಡೆಸಿ ನಿಮ್ಮ ಸ್ವಇಚ್ಛಾ ಹೇಳಿಕೆ ಪಡೆದಿದ್ದಾಗಿ, ನಂತರ ದಿಃ22.01.2021 ರಂದು FSL Report ಅನ್ನು ಪಡೆದಿದ್ದಾಗಿ, ನಂತರ ಆರೋಪಿತರಾದ ನಿಮ್ಮ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

23. ನೀವು ಈ ಕೇಸಿನಲ್ಲಿ ಹೆಚ್ಚಿಗೆ ಏನನ್ನಾದರು ಹೇಳುವುದಿದೆಯೇ?

ಉತ್ತರಃ

24. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಕೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ಧೃಡೀಕರಿಸುತ್ತೇನೆ.

Sd/-
[ಕುಮಾರಿ ಸುಜಾತ ]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.